ಸಾರ್ವಜನಿಕ ಶಿಕ್ಷಣ ಇಲಾಖೆ ಕರ್ನಾಟಕ ಸರ್ಕಾರ ಸರ್ವ ಶಿಕ್ಷಣ ಅಭಿಯಾನ

# ಚಿಣ್ಣರ ಚೇತನ

ಜನವರಿ 2010

ಓ ನನ್ನ ಚೇತನಾ ಆಗು ನೀ ಅನಿಕೇತನ



# ಸಂಕ್ರಾಂತಿ ಹಬ್ಬ ಸೂರ್ಯಗ್ರಹಣ ಅಬ್ಬಾ!

ಈ ತಿಂಗಳು ಸೂರ್ಯನದೇ ಸುದ್ದಿ. ಅವನು ದಿಕ್ಕು ಬದಲಿಸಿದ್ದಕ್ಕೆ ಜನ ಎಳ್ಳು ಬೆಲ್ಲ ತಿಂದರು. ಅವನಿಗೆ ಗ್ರಹಣ ಹಿಡಿದಾಗ ಭೀತಿಯಿಂದ ಉಪವಾಸ ಮಾಡಿದರು! ಆದರೆ ಗ್ರಹಣಕ್ಕೆ ಹೆದರಬೇಕಿಲ್ಲ ಎಂದು ನಿಮಗೆ ಗೊತ್ತು ತಾನೆ?

ಸುಗ್ಗಿಯ ಹಬ್ಬ ಸಂಕ್ರಾಂತಿ. ಸಮೃದ್ಧಿಯ ಸಂಕೇತವಾದ ಸಂಕ್ರಾಂತಿ ಹಬ್ಬವನ್ನು ಜನವರಿ 14ರಂದು ಭಾರತದೆಲ್ಲೆಡೆ ವಿವಿಧ ಹೆಸರುಗಳಿಂದ ಆಚರಿಸಲಾಗುತ್ತದೆ. ಎಳ್ಳು ಬೆಲ್ಲ ತಿಂದು ಒಳ್ಳೆ ಮಾತಾಡುವ ಹಬ್ಬ ಈ ಸಂಕ್ರಾಂತಿ. ಇದು ಬೆಳೆ ಕಟಾವಿನ ಕಾಲವೂ ಹೌದು.

ಪ್ರತಿ ವರ್ಷ ಡಿಸೆಂಬರ್ 21–22ರ ವೇಳೆಗೆ ಭೂಮಿಯ ಮಕರಸಂಕ್ರಾಂತಿ ವೃತ್ತದ ಮೇಲೆ ಸೂರ್ಯ ನೇರವಾಗಿ ಪ್ರಕಾಶಿಸಲು ಪ್ರಾರಂಭಿಸುತ್ತಾನೆ. ಸೂರ್ಯನ ಉತ್ತರದಿಕ್ಕಿನ ಪ್ರಯಾಣದ ಆರಂಭವನ್ನು ಸೂಚಿಸುವ, ಹಗಲಿನ ಸಮಯ ಹೆಚ್ಚುತ್ತಾ ಹೋಗುವ ಈ ಕಾಲವೇ ಉತ್ತರಾಯಣ. ಹಿಂದೆ ಉತ್ತರಾಯಣ ಸಂಕ್ರಾಂತಿ ಹಬ್ಬದ ದಿನವೇ ಪ್ರಾರಂಭವಾಗುತ್ತಿತ್ತು. ಆದರೆ ಸಮಯ ಸರಿದಂತೆ ಭೂಮಿಯ ಚಲನೆಯಲ್ಲಿ ಉಂಟಾದ ಬದಲಾವಣೆಗಳಿಂದ ಉತ್ತರಾಯಣ ಡಿಸೆಂಬರ್‌ನಲ್ಲೇ ಪ್ರಾರಂಭವಾಗುತ್ತದೆ. ಆದರೂ ನಾವು ಮಾತ್ರ ಸಂಕ್ರಾಂತಿಯನ್ನು ಜನವರಿ 14ರಂದೇ ಆಚರಿಸುತ್ತೇವೆ.

ಸಂಕ್ರಾಂತಿಯ ಮರುದಿನ ಕಂಕಣ ಸೂರ್ಯಗ್ರಹಣ ಈ ವರ್ಷದ ವಿಶೇಷ. ಭೂಮಿಗೂ ಸೂರ್ಯನಿಗೂ ನಡುವೆ ಚಂದ್ರ ಅಡ್ಡ ಬಂದಾಗ ಸೂರ್ಯಗ್ರಹಣ ಆಗುತ್ತದೆ ಎಂದು ನಮಗೆಲ್ಲ ಗೊತ್ತು. ಗ್ರಹಣದ ಸಂದರ್ಭದಲ್ಲಿ ಚಂದ್ರ ಸೂರ್ಯನನ್ನು ಪೂರ್ತಿಯಾಗಿ ಮರೆಮಾಡಿದರೆ ಆಗ ಅದು ಪೂರ್ಣ ಸೂರ್ಯಗ್ರಹಣ ಆಗುತ್ತದೆ. ಆದರೆ ಈ ಬಾರಿ ಹಾಗಲ್ಲ. ಚಂದ್ರ ಸೂರ್ಯನಿಗೆ ಅಡ್ಡ ಬಂದರೂ ಸೂರ್ಯ ಸಂಪೂರ್ಣ ಮರೆಯಾಗುವುದಿಲ್ಲ. ಸೂರ್ಯನ ಬಿಂಬ ಬಳೆಯ ಹಾಗೆ ಬೆಳಗುತ್ತದೆ. ಹಾಗಾಗಿ ಇದು ಕಂಕಣ ಗ್ರಹಣ. ಇಂಥ ಅಪರೂಪದ ಗ್ರಹಣ ಮತ್ತೆ ಕ್ರಿ.ಶ. 3043ನೇ ಇಸವಿಯಲ್ಲಿ ಸಂಭವಿಸಲಿದೆಯಂತೆ.

ಗ್ರಹಣ ಒಂದು ನೈಸರ್ಗಿಕ ಘಟನೆ. ಅದನ್ನು ನೋಡಿ ಆನಂದಿಸಬೇಕೇ ಹೊರತು ಹೆದರಿ ಮನೆಯೊಳಗೆ ಅವಿತಿರುವುದರಲ್ಲಿ ಅರ್ಥವಿಲ್ಲ. ಆದರೆ ನೆನಪಿಡಿ, ಸೂರ್ಯನನ್ನು ಬರಿಗಣ್ಣಿನಿಂದ ನೋಡುವುದು ಅಪಾಯ. ಅದಕ್ಕೆಂದೇ ತಯಾರಿಸಿರುವ ವಿಶೇಷ ಕನ್ನಡಕ ಅಥವಾ ವಿಶಿಷ್ಟ ಕ್ಯಾಮೆರಾ ಬಳಸಿ ಗ್ರಹಣವನ್ನು ನೋಡಬಹುದು.



ತಿಳಿ ಬೆಳಿ

## ಮರದ ಶತ್ರುವೆ?



ಮರಕುಟಿಗ ಒಂದು ಹಕ್ಕಿ. ಅದು ಮರವನ್ನು ಕುಕ್ಕಿ ಕುಟುಕಿ ತೂತು ಮಾಡುತ್ತದೆ. ಅದಕ್ಕೆ ಆ ಹೆಸರು. ಕುಟುಕುವಾಗ ಅದು ಮರಕ್ಕೆ ಹಾನಿ ಉಂಟುಮಾಡುತ್ತದೆ ಎನ್ನಿಸುವುದಲ್ಲವೇ? ಆದರೆ ಈ ಭಾವನೆ ಸರಿಯಲ್ಲ. ಹೇಗೆ ಎನ್ನುವಿರಾ?

ಮರದ ಕೊಂಬೆಗಳು ಮತ್ತು ಬಿರುಕುಗಳ ಒಳಗೆ ಅನೇಕ ಮರಿಹುಳಗಳು ಮತ್ತು ಕೀಟಗಳು ಇರುತ್ತವೆ. ಇವು ಕಣ್ಣಿಗೆ ಕಾಣದಿದ್ದರೂ, ಅವು ಇರುವ ಜಾಗವನ್ನು ಪತ್ತೆ ಮಾಡಿಕೊಳ್ಳುವ ಸಾಮರ್ಥ್ಯ ಆ ಹಕ್ಕಿಗೆ ಇದೆ. ಅದು ಆ ಜಾಗವನ್ನು ಕುಕ್ಕಿ ಆಳವಾದ ತೂತು ಮಾಡಿಕೊಳ್ಳುತ್ತದೆ. ಆ ತೂತಿನೊಳಗೆ ತನ್ನ ಕೊಕ್ಕನ್ನು ಇಳಿ ಬಿಟ್ಟು, ಅದರೊಳಗಿರುವ ಹುಳು ಹುಪ್ಪಟೆಗಳನ್ನು ತಿನ್ನುತ್ತದೆ. ಮರಕುಟಿಗ ಈ ಹುಳುಗಳನ್ನು ತಿಂದು ಹಾಕದಿದ್ದರೆ, ಅವು ಮರವನ್ನು ಹಾನಿಗೊಳಿಸುತ್ತವೆ.

ಮರಕುಟಿಗದ ಕೊಕ್ಕು ಉಳಿಯಂತಿರುತ್ತದೆ. ಆದ್ದರಿಂದ ಮರವನ್ನು ಕುಟುಕಿ ತೂತು ಮಾಡಿ, ತನ್ನ ಉದ್ದನೆಯ ನಾಲಗೆಯಿಂದ ತೂತಿನ ಆಳದಲ್ಲಿರುವ ಕೀಟಗಳನ್ನು ಹಿಡಿಯುತ್ತದೆ. ಮರದ ಕೊಂಬೆಗಳಲ್ಲಿ ದೊಡ್ಡ ಗಾತ್ರದ ತೂತು ಕೊರೆದು ಅಲ್ಲೇ ವಾಸಿಸುತ್ತವೆ. ಕೆಲವು ವೇಳೆ ಮರಕುಟಿಗ ಎರಡು ರಂಧ್ರಗಳನ್ನು ಕೊರೆಯುತ್ತದೆ. ಈ ರಂಧ್ರಗಳು ಹಿಂಬಾಗಿಲು, ಮುಂಬಾಗಿಲಿನಂತೆ ಕೆಲಸ ಮಾಡುತ್ತವೆ. ತನ್ನ ಶತ್ರುವಿನ ಸುಳಿವು ಕಂಡರೆ, ಈ ರಂಧ್ರದ ಮೂಲಕ ಹೊರಕ್ಕೆ ಹೋಗುತ್ತದೆ!

## ಸೂರ್ಯ ನಮಸ್ಕಾರ



'ಹೆಲ್ತ್ ಈಸ್ ವೆಲ್ತ್' ಎಂಬ ಇಂಗ್ಲೀಷ್ ಮಾತನ್ನು ಕೇಳಿದ್ದೀರಾ? ಅಂದರೆ 'ಆರೋಗ್ಯವೇ ಅಷ್ಟೈಶ್ವರ್ಯ'. ಆರೋಗ್ಯ ಚೆನ್ನಾಗಿದ್ದರೆ ತಾನೇ ಏನನ್ನಾದರೂ ಸಾಧಿಸಲು ಸಾಧ್ಯ?

ಸೂರ್ಯ ನಮಗೆ ಆರೋಗ್ಯ ಕೊಡುತ್ತಾನೆ. ಅವನ ಹೆಸರಿನಲ್ಲಿ ನಮ್ಮ ಋಷಿಗಳು ಸೂರ್ಯ ನಮಸ್ಕಾರ ಎಂಬ ವ್ಯಾಯಾಮವನ್ನು ರಚಿಸಿದ್ದಾರೆ. ಹಲವು ಯೋಗಾಸನಗಳಿಂದ ಕೂಡಿರುವ ಸೂರ್ಯ ನಮಸ್ಕಾರ ದೇಹಕ್ಕೆ, ಮನಸ್ಸಿಗೆ, ಬುದ್ಧಿಗೆ, ಉತ್ತಮ ಆರೋಗ್ಯ ನೀಡುತ್ತದೆ. ದೇಹಕ್ಕೆ ಶಕ್ತಿ, ಮನಸ್ಸಿಗೆ ಲವಲವಿಕೆ, ಬುದ್ಧಿಗೆ ಚುರುಕುತನ ತಂದುಕೊಡುತ್ತದೆ. ಪ್ರತಿ ದಿನ 13 ಸೂರ್ಯ ನಮಸ್ಕಾರಗಳನ್ನು ಮಾಡುವುದರಿಂದ ಆರೋಗ್ಯ ಹೆಚ್ಚುತ್ತದೆ. ಮಕ್ಕಳೇ, ನಿಮ್ಮ ವ್ಯಾಯಾಮ ಶಿಕ್ಷಕರಿಂದ ಸೂರ್ಯ ನಮಸ್ಕಾರ ಕಲಿಯಲು ಆರಂಭಿಸಿ. 2010 ಜನವರಿ 22ರಂದು 'ರಥ ಸಪ್ತಮಿ'. ಅದು ಸೂರ್ಯನನ್ನು ಪೂಜಿಸುವ ದಿವಸ. ಅಂದೇ ನೀವೂ ಆರಂಭಿಸಬಹುದಲ್ಲವೇ?

## ಸಮಾಚಾರ



ಕನ್ನಡಿಗ ವಿ ಕೆ ಮೂರ್ತಿ ಅವರಿಗೆ ಪ್ರತಿಷ್ಠಿತ ಫಾಲ್ಕೆ ಪ್ರಶಸ್ತಿ ಲಭಿಸಿದೆ. ಖ್ಯಾತ ನಟ ಗುರುದತ್ ನಿರ್ದೇಶನದ 'ಪ್ಯಾಸಾ', 'ಕಾಗಜ್ ಕೆ ಫೂಲ್' ಮುಂತಾದ ಕಪ್ಪುಬಿಳುಪು ಸಿನಿಮಾಗಳಿಗೆ ಅದ್ಭುತ ಛಾಯಾಗ್ರಹಣ ನೀಡಿ ಎಲ್ಲರ ಗಮನ ಸೆಳೆದವರು ಮೂರ್ತಿ. ಅವರ ಬದುಕನ್ನು ಕುರಿತು ಲೇಖಕಿ ಉಮಾರಾವ್ 'ಬಿಸಿಲ ಕೋಲು' ಎಂಬ ಒಳ್ಳೆಯ ಪುಸ್ತಕವೊಂದನ್ನು ಬರೆದಿದ್ದಾರೆ.

ಸತತ 23 ವರ್ಷ ಪಶ್ಚಿಮಬಂಗಾಳದ ಮುಖ್ಯಮಂತ್ರಿಯಾಗಿದ್ದ ಕಮ್ಯುನಿಸ್ಟ್ ನಾಯಕ ಜ್ಯೋತಿ ಬಸು ಜನವರಿ 17ರಂದು ನಿಧನರಾದರು. 95 ವರ್ಷ ವಯಸ್ಸಾಗಿದ್ದ ಬಸು, ತಮ್ಮ ದೇಹವನ್ನು ಸರ್ಕಾರಿ ಆಸ್ಪತ್ರೆಗೆ ದಾನ ಮಾಡಿದ್ದಾರೆ. ಅವರು ನೇತ್ರದಾನವನ್ನೂ ಮಾಡಿದ್ದಾರೆ.



ವಿಶ್ವಕಪ್ ಹಾಕಿ ಪಂದ್ಯಗಳಿಗಾಗಿ ಪುಣೆಯಲ್ಲಿ ತರಬೇತಿ ಪಡೆಯುತ್ತಿದ್ದ 'ಹಾಕಿ ಇಂಡಿಯಾ' ಟೀಮ್ ಆಟಗಾರರು ತಮಗೆ ಸಲ್ಲಬೇಕಾದ ಬಾಕಿ ಹಣ ನೀಡಬೇಕೆಂದು ಕೇಳಿ ರಾಷ್ಟ್ರೀಯ ಶಿಬಿರವನ್ನು ಬಹಿಷ್ಕರಿಸಿದರು. ಇಂಡಿಯನ್ ಒಲಿಂಪಿಕ್ ಅಧ್ಯಕ್ಷ ಸುರೇಶ್ ಕಲ್ಮಾಡಿಯವರ ಮಧ್ಯಪ್ರವೇಶದಿಂದ ಸಮಸ್ಯೆ ಇತ್ಯರ್ಥವಾಯಿತು.

ಫೆಬ್ರವರಿ 19, 20 ಮತ್ತು 21 ರಂದು ಗದಗದಲ್ಲಿ ನಡೆಯಲಿರುವ 76ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಕಾದಂಬರಿಗಾರ್ತಿ ಗೀತಾ ನಾಗಭೂಷಣ ಆಯ್ಕೆಯಾಗಿದ್ದಾರೆ. ಈವರೆಗೆ ಅಧ್ಯಕ್ಷ ಸ್ಥಾನ ಅಲಂಕರಿಸಿದ ಮಹಿಳೆಯರಲ್ಲಿ ಇವರು ನಾಲ್ಕನೆಯವರು.

## ಮಾಸದ ದುಃಖ







ಕನ್ನಡ ಲೋಕ ಈಚೆಗೆ ಮೂವರು ಮಹನೀಯರನ್ನು ಕಳೆದುಕೊಂಡಿತು

ಈ ವರ್ಷದ ಆರಂಭ ಕನ್ನಡ ಸಾಂಸ್ಕೃತಿಕ ಲೋಕಕ್ಕೆ ಬಹಳ ಆಘಾತಕಾರಿಯಾಗಿದೆ. ಕಳೆದ ತಿಂಗಳ 30ನೆಯ ತಾರೀಖು ಕನ್ನಡದ ಶ್ರೇಷ್ಠ ಚಿತ್ರ ನಟ ಡಾ.ವಿಷ್ಣುವರ್ಧನ್ ನಿಧನರಾದರು. ಹಿಂದಿನ ದಿವಸ ಮಹಾನ್ ಗಾಯಕ ಡಾ.ಸಿ. ಅಶ್ವಥ್ ವಿಧಿವಶರಾಗಿದ್ದರು. ಅದಾದ 20 ದಿನಗಳಲ್ಲಿ ಮತ್ತೊಬ್ಬ ಮರೆಯಲಾಗದ ನಟ ಕೆ ಎಸ್ ಅಶ್ವಥ್ ಕೂಡ ನಮ್ಮನ್ನಗಲಿದರು.

200 ಚಿತ್ರಗಳಲ್ಲಿ ನಟಿಸಿರುವ ವಿಷ್ಣುವರ್ಧನ್‌ರ ಮೊದಲ ಚಿತ್ರ 'ವಂಶವೃಕ್ಷ'. ಅವರಿಗೆ ಕೀರ್ತಿ ತಂದುಕೊಟ್ಟ ಚಿತ್ರ 'ನಾಗರಹಾವು'. ಎಲ್ಲ ಪಾತ್ರಗಳಲ್ಲೂ ಅದ್ಭುತವಾಗಿ ಅಭಿನಯಿಸುತ್ತಿದ್ದ ವಿಷ್ಣು ಅವರಿಗೆ ಅಭಿನಯ ಕರತಲಾಮಲಕವಾಗಿತ್ತು. ಅದಲ್ಲದೆ ಅವರು ಒಳ್ಳೆಯ ಮನುಷ್ಯ ಎನಿಸಿಕೊಂಡಿದ್ದರು ಕೂಡ.

ಭಾವಪೂರ್ಣ ಗಾಯಕರಾಗಿದ್ದ ಡಾ.ಸಿ.ಅಶ್ವಥ್ ಅವರದು ಕಂಚಿನ ಕಂಠ. ಕನ್ನಡದ ಶ್ರೇಷ್ಠ ಕವಿಗಳ ಕವಿತೆಗಳನ್ನು ಹಾಡಿ ಜನ ಮನಕ್ಕೆ ತಲುಪುವಂತೆ ಮಾಡಿದ ಅಶ್ವತ್ ಹಾಡಿರುವ ಶಿಶುನಾಳ ಶರೀಫರ ಗೀತೆಗಳಂತೂ ಬಹು ಜನಪ್ರಿಯ. ಕಾಕತಾಳೀಯವೆಂದರೆ ತಮ್ಮ 70ನೇ ಹುಟ್ಟು ಹಬ್ಬದ ದಿನವೇ ಅವರು ತೀರಿಕೊಂಡರು.

ಈ ಎರಡು ದುಃಖದ ಸುದ್ದಿಗಳ ಹೊಡೆತದಿಂದ ಚೇತರಿಸಿಕೊಳ್ಳುವಷ್ಟರಲ್ಲೇ ಹೆಸರಾಂತ ಪೋಷಕ ನಟ ಕೆ ಎಸ್ ಅಶ್ವಥ್ ಕೂಡ ತೀರಿಕೊಂಡರು. ನಾಗರಹಾವು ಚಿತ್ರದಲ್ಲಿ ಅವರು ಮಾಡಿದ ಚಾಮಯ್ಯ ಮೇಷ್ಟ್ರು ಪಾತ್ರ ಕನ್ನಡಿಗರ ಮನಸ್ಸಿನಲ್ಲಿ ಎಂದೆಂದೂ ಉಳಿಯುವಂಥದು.

ಈ ಮಹಾನ್ ಕಲಾವಿದರನ್ನು ಮರೆಯಲಾಗದು. ನಾವು ಅವರ ಬದುಕಿನಿಂದ ಪ್ರೇರಣೆ ಪಡೆದು ಮುನ್ನಡೆಯಬೇಕು.

## ಒಗಟುಗಳು



1. ಕೈ ಹಾಕಿದರೆ ಬಾಯಿ ಬಿಡ್ತಾನೆ
2 ಹಿಡಿದರೆ ಹಿಡಿ ತುಂಬ ಬಿಟ್ಟರೆ ಮನೆ ತುಂಬಾ
3 ಅಕ್ಕನ ಮನೆಗೆ ತಂಗಿ ಹೋಗ್ತಾಳೆ. ಆದರೆ ತಂಗಿ ಮನೆಗೆ ಅಕ್ಕ ಬರಲ್ಲ
4 ಬೆಳಿಗ್ಗೆ 4 ಕಾಲು, ಮಧ್ಯಾಹ್ನ 2 ಕಾಲು ಸಂಜೆ 3 ಕಾಲೂರಿ ನಡೆಯುವ ಪ್ರಾಣಿ
5 ಕಟ್ಟೆಯಿಲ್ಲದ ಕೆರೆಯಲ್ಲಿ ತಟ್ಟೆ ತೇಲ್ಕೊಂಡೋಯ್ತದೆ.

(ಉತ್ತರಗಳು ಮುಂದಿನ ಸಂಚಿಕೆಯಲ್ಲಿ)

## ನದಿ ದಾಟಿಸಿ ಪ್ಲೀಸ್

ಒಂದು ತೋಳ, ಒಂದು ಟಗರು, ಒಂದು ಕೋಸನ್ನು ನದಿಯ ಎದುರು ದಡಕ್ಕೆ ತಲುಪಿಸಬೇಕಾಗಿದೆ. ಇರುವ ಒಂದು ಚಿಕ್ಕ ದೋಣಿಯಲ್ಲಿ ಎಲ್ಲವೂ ಒಟ್ಟಿಗೆ ಹೋಗಲು ಸಾಧ್ಯವಾಗದು. ಒಮ್ಮೆಗೆ ಯಾವುದಾದರೂ ಒಂದನ್ನು ಮಾತ್ರ ನಿಮ್ಮೊಂದಿಗೆ ಒಯ್ಯಬಹುದು. ತೋಳದ ಜತೆ ಟಗರನ್ನಾಗಲಿ, ಟಗರಿನ ಜತೆ ಕೋಸನ್ನಾಗಲಿ ಬಿಟ್ಟು ಹೋಗುವಂತಿಲ್ಲ. ಏಕೆಂದರೆ ತೋಳ ಟಗರನ್ನು, ಟಗರು ಕೋಸನ್ನು ತಿನ್ನಲು ಹೊಂಚು ಹಾಕುತ್ತಿವೆ. ಇಂಥ ಸನ್ನಿವೇಶದಲ್ಲಿ ಮೂರನ್ನೂ ಸುರಕ್ಷಿತವಾಗಿ ಎದುರುದಡಕ್ಕೆ ಸಾಗಿಸುವುದು ಹೇಗೆ? ಯೋಚಿಸಿ. ಉತ್ತರಕ್ಕೆ ಮುಂದಿನ ಸಂಚಿಕೆ ನೋಡಿ.

## ಕಳೆದ ಸಂಚಿಕೆಯ ಪ್ರಶ್ನೆಗೆ ಉತ್ತರಗಳು

1. ಮೂರು ಪೆನ್ಸಿಲ್‌ಗಳನ್ನು ತೆಗೆದು ಮೂರು ಚೌಕಗಳನ್ನು ಉಳಿಸುವುದು ಹೀಗೆ:



2. ಜಾರುವ ಕಪ್ಪೆ ಒಂದು ಗಂಟೆಗೆ ಒಂದು ಅಡಿ ಏರಿದಂತಾಯಿತಲ್ಲವೆ? ಅಂದರೆ 7 ಗಂಟೆಗೆ 7 ಅಡಿ. 8ನೇ ಗಂಟೆಯಲ್ಲಿ ಅದು 3 ಅಡಿ ಮೇಲೇರಿದಾಕ್ಷಣ ಗುರಿ ತಲುಪುವುದರಿಂದ ಜಾರುವ ಪ್ರಶ್ನೆ ಬರುವುದಿಲ್ಲ. ಹಾಗಾಗಿ ಉತ್ತರ: 10 ಅಡಿ ಏರಲು ಕಪ್ಪೆಗೆ 8 ಗಂಟೆ ಬೇಕು.
3. ಒಗಟು ಬಿಡಿಸಿ ಪ್ರಶ್ನೆಗೆ ಉತ್ತರ: ಬೆಂಕಿ ಕಡ್ಡಿ
4. ಪದಬಂಧದ ಉತ್ತರಗಳು: ಮಂದಾನಿಲ, ಜನಕರಾಜ, ಬಕಪಕ್ಷಿ, ರಸಪುರಿ, ವನಸಿರಿ ಮತ್ತು ಕನಕದಾಸ

ಈ ಸಂಚಿಕೆ ಓದಿ ನಿಮಗೆ ಏನೆನ್ನಿಸಿತು? ಯಾವುದು ಇಷ್ಟವಾಯಿತು, ಯಾವುದು ಇಷ್ಟವಾಗಲಿಲ್ಲ? ಪತ್ರ ಬರೆದು ನಮಗೆ ತಿಳಿಸಿ. ವಿಳಾಸ ಇಲ್ಲಿದೆ.

ಅದಮ್ಯ ಚೇತನ
'ಅನ್ನಪೂರ್ಣ'
ಮಹಾನಗರಪಾಲಿಕೆ ಸಮುದಾಯ ಭವನ
ಗವಿಪುರ, ಬೆಂಗಳೂರು –19

ಸರ್ವ ಶಿಕ್ಷಣ ಅಭಿಯಾನ
ಎಲ್ಲರೂ ಕಲಿಯೋಣ–ಎಲ್ಲರೂ ಬೆಳೆಯೋಣ

ಅದಮ್ಯ ಚೇತನ ಬೆಂಗಳೂರು

ಚಿಣ್ಣರ ಚೇತನ–ಶಾಲಾ ಮಕ್ಕಳ ಗೋಡೆ ಪತ್ರಿಕೆ. ಕರ್ನಾಟಕ ಸರ್ಕಾರ, ಸರ್ವಶಿಕ್ಷಣ ಅಭಿಯಾನ ಮತ್ತು ಅದಮ್ಯ ಚೇತನ ಸಂಸ್ಥೆ– ಇವರ ಸಹಭಾಗಿತ್ವದಲ್ಲಿ ಪ್ರಕಾಶಿಸಿದೆ.
© ಹಕ್ಕುಗಳನ್ನು ಕಾದಿರಿಸಲಾಗಿದೆ

ಸರ್ವ ಶಿಕ್ಷಣ ಅಭಿಯಾನ ಮಿಷನ್
ಬೆಂಗಳೂರು